**ಚಾಸಾಃ 2 ಪ್ರಾಸಾಃ 2**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ:201/2025**

| | |
|---|---|
| ಹೆಸರು | :ನಿತ್ಯಾನಂದ |
| ತಂದೆಯ ಹೆಸರು | :ಲಕ್ಷ್ಮಣ ಕೆ |
| ಪ್ರಾಯ | :61 ವರ್ಷ |
| ಉದ್ಯೋಗ | :ಕೃಷಿ |
| ವಾಸ | :ಅರಂತೋಡು ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 15.09.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿ. 23.11.2024 ರಂದು ನಾನು ಮತ್ತು ಚಾಸಾ-3 ರವರು ಅರಂತೋಡು ರಸ್ತೆ ಬಳಿ ಇದ್ದಾಗ ಸುಳ್ಯ ಪಿ.ಎಸ್.ಐ ಸಂತೋಷ್ ರವರು ನಮ್ಮ ಬಳಿ ಬಂದು ಒಂದು ಅಂಗಡಿಯಲ್ಲಿ ರೈಡ್ ಮಾಡುವ ವಿಚಾರವಾಗಿ ಪಂಚಾಯತುದಾರರಾಗಿ ಬರಬೇಕು ಎಂದು ನೋಟೀಸು ನೀಡಿದ್ದು ನಾವು ಅದಕ್ಕೆ ಒಪ್ಪಿ ಅವರ ಜೊತೆ ಹೋಗಿರುತ್ತೇವೆ. ಪೊಲೀಸರು ನಮ್ಮನ್ನು ಅರಂತೊಂಡು ಅಡ್ಕಬಳೆ ರಸ್ತೆಯಲ್ಲಿರುವ ಗುಳಿಗರಾಜ ಚಿಕನ್ ಸೆಂಟರ್ ಗೆ ಕರೆದುಕೊಂಡು ಹೋಗಿದ್ದು ಆಗ ಸಮಯ 9.15 ಗಂಟೆಯಾಗಿತ್ತು. ಪೊಲೀಸರು ಅಲ್ಲಿ ಪರಿಶೀಲನೆ ಮಾಡಿದಾಗ ಅಂಗಡಿಯ ಒಳಭಾಗದಲ್ಲಿ ಒಂದು ಪ್ಲಾಸ್ಟಿಕ್ ಚೀಲ ಇದ್ದು ಸದರಿ ಚೀಲವನ್ನು ತೆಗೆದು ನೋಡಲಾಗಿ ತಲಾ 90 ಎಂ.ಎಲ್ ನ 44 ಮೈಸೂರು ಲ್ಯಾನ್ಸರ್ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳು ಇತ್ತು. ಅವುಗಳನ್ನು ಮಾರಾಟ

ಮಾಡಲು ಪರವಾನಿಗೆ ಇದೆಯಾ ಎಂದು ಅಂಗಡಿಯ ಮಾಲೀಕರಾದ ದಿನೇಶ್ ರವರನ್ನು ವಿಚಾರಿಸಲಾಗಿ ಅವರು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ಆ ಕಾರಣಕ್ಕೆ ಪೊಲೀಸರು ಸದರಿ ವಿಸ್ಕಿ ಪ್ಯಾಕೆಟ್ ಗಳನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿ ಅವುಗಳಿಗೆ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಈ ಬಗ್ಗೆ 9.20 ಗಂಟೆಯಿಂದ 11.11 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ವೀಡಿಯೋ ಚಿತ್ರೀಕರಣ ಮಾಡಿರುತ್ತಾರೆ. ಪಂಚನಾಮೆಗೆ ನಾನು ಮತ್ತು ಉಮೇಶ್ ರವರು ಸಹಿ ಮಾಡಿರುತ್ತೇವೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-1 ನೋಟೀಸಿನಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ನಿಪಿ-2ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ನಿಪಿ-5 ಮತ್ತು 6 ಭಾವಚಿತ್ರಗಳನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಪಂಚನಾಮೆ ಕಾಲಕ್ಕೆ ಅಮಾನತು ಪಡಿಸಿಕೊಂಡ 44 ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳು ಮತ್ತು ಪಾಲಿತಿನ್ ಚೀಲಗಳನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಈ ಪ್ರಕರಣದ ವಿಚಾರವಾಗಿ ಮಾರನೇ ದಿನ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಗುಳಿಗರಾಜ ಚಿಕನ್ ಸೆಂಟರ್ ನ ಮಾಲೀಕರಾದ ಆರೋಪಿ ದಿನೇಶ್ ರವರನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ</u>**

ಅರಂತೋಡು ಮುಖ್ಯ ರಸ್ತೆಯಿಂದ ನಮ್ಮ ಮನೆ 100 ಮೀ ಅಂತರ ಇದೆ. ಅರಂತೋಡು ಪೇಟೆಯಿಂದ ಘಟನಾ ಸ್ಥಳ 700 ಮೀ ದೂರ ಇದೆ. ಕುಕ್ಕುಂಬಲ ಎಂಬುದು ನನ್ನ ವಿಳಾಸ. ನಾನು ಪೇಟೆಯಿಂದ ಮನೆಗೆ ಹೋಗುವಾಗ ಪೊಲೀಸರು ನನ್ನನ್ನು ಕರೆದಿರುತ್ತಾರೆ. ನಾನು ಎಲ್ಲಾ ಸಹಿಗಳನ್ನು ಒಂದೇ ಸಮಯದಲ್ಲಿ ಹಾಕಿರುತ್ತೇನೆ.

ನಾನು ಸಹಿ ಮಾಡುವಾಗ ನನ್ನ ಜೊತೆ ಉಮೇಶ್ ರವರೂ ಸಹ ಇದ್ದರು. ನಾನು 9.20 ಗಂಟೆ ಸಮಯಕ್ಕೆ ಸಹಿ ಮಾಡಿರುತ್ತೇನೆ. ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋದಾಗ ಹೇಳಿಕೆ ನೀಡಿರುತ್ತೇನೆ. ಪೊಲೀಸರು ನಾನು ಹೇಳಿದ ಹಾಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಟೆಟ್ರಾ ಪ್ಯಾಕೆಟ್ ಅಂಗಡಿಯ ಒಳಭಾಗದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿತ್ತು. ಅದನ್ನು ಪೊಲೀಸರು ತೋರಿಸಿರುತ್ತಾರೆ. ಅದು ಅಂಗಡಿಯ ಯಾವ ದಿಕ್ಕಿನಲ್ಲಿತ್ತು ಎಂದು ಹೇಳಲಾಗುವುದಿಲ್ಲ. ಅದು ಯಾವ ದಿಕ್ಕಿನಲ್ಲಿತ್ತು ಎಂದು ಮ್ಯಾಪ್ ನಲ್ಲಿ ಬರೆದಿರುತ್ತಾರೆ. ಟೆಟ್ರಾ ಪ್ಯಾಕೆಟ್ ನ ಮೇಲೆ ನಂಬರುಗಳು ಇದ್ದವು. ಘಟನಾ ಸ್ಥಳದಿಂದ 2 ಕಿ.ಮೀ ಅಂತರದಲ್ಲಿ ಎಂ.ಎಸ್.ಐ.ಎಲ್ ಅಂಗಡಿ ಇರುತ್ತದೆ. ಎಂ.ಎಸ್.ಐ.ಎಲ್ ನಲ್ಲಿ ಸಾಮಾನ್ಯವಾಗಿ ಕಡಿಮೆ ದರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗುಳಿಗರಾಜ ಚಿಕನ್ ಸೆಂಟರ್ ಯಾರ ಮಾಲಿಕತ್ವಕ್ಕೆ ಸೇರಿದ್ದು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಅದು ಕಲ್ಲುಮುಟ್ಲು ರವರ ಕುಟುಂಬದವರಿಗೆ ಸೇರಿದ್ದು. ಅಂಗಡಿಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ಆರೋಪಿ ಆ ದಿನ ಪೊಲೀಸರನ್ನು ನೋಡಿ ಓಡಿ ಹೋಗಿರುವುದಿಲ್ಲ. ಆ ದಿನ ಆರೋಪಿಯನ್ನು ಪೊಲೀಸರು ತಮ್ಮ ಜೊತೆ ಕರೆದುಕೊಂಡು ಹೋಗಿರುತ್ತಾರೆ.

ಮಾರನೇ ದಿನ ನಾನು ಬೆಳಿಗ್ಗೆ 10 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಮಾರನೇ ದಿನ ಪೊಲೀಸ್ ಠಾಣೆಗೆ ನಾನೊಬ್ಬನೇ ಹೋಗಿರುತ್ತೇನೆ. ಕಚ್ಚಾ ನಕ್ಷೆಗೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಹೇಳಿಕೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ದಾಖಲೆಗಳಿಗೆ ಸಹಿ ಮಾಡುವಾಗ ಉಮೇಶ್ ರವರು ನನ್ನ ಜೊತೆ ಇದ್ದರು. ನಕ್ಷೆಗೆ ಉಮೇಶ್ ರವರ ಸಹಿ ಇಲ್ಲ ಎಂದರೆ ಸರಿಯಲ್ಲ. ನನಗೆ ಪೊಲೀಸರ ಪರಿಚಯ ಇದೆ ಎಂದರೆ ಕೆಲವರ ಪರಿಚಯ ಇರುತ್ತದೆ. ಪೊಲೀಸರ ದಾಕ್ಷಿಣ್ಯಕ್ಕೆ ಒಳಗಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನ ಸ್ವಾದೀನದಲ್ಲಿ ಯಾವುದೇ ವಿಸ್ಕಿ

ಪ್ಯಾಕೆಟ್ ಗಳು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ಯಾವುದೇ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ಪೊಲೀಸರು ತಮ್ಮ ಜೊತೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ತಯಾರು ಮರಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಉಮೇಶ್ ರವರ ಮನೆ 4 ಕಿ.ಮೀ ದೂರ ಇದೆ ಎಂದರೆ ಸರಿ. ಘಟನಾ ಸಮಯದಲ್ಲಿ ಉಮೇಶ್ ರವರು ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ